**ಸಾಕ್ಷಿಯನ್ನು ದಿಃ 29.10.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 3 ರಿಂದ 6 ನೇ ಪ್ರತಿವಾದಿಗಳ ಪರ ಶ್ರೀ ಎಂ.ಆರ್.ಹಚ್. ವಕೀಲರಿಂದಃ-**

ದಿಃ26.04.2022 ರ ನಿಪಿ. 1ರ ಒಪ್ಪಂದ ಕರಾರು ಪತ್ರದಲ್ಲಿ ಬರೆದಿರುವ ಒಕ್ಕಣೆಯ ವಿಚಾರಗಳು ನನಗೆ ಗೊತ್ತಿರುತ್ತದೆ. ಅದರಲ್ಲಿ ನೊಂದಣಿ ಕ್ರಯ ಪತ್ರ ಮಾಡಿಸಿಕೊಳ್ಳಲು ಸಮಯ ನಿಗದಿ ಆಗಿತ್ತು ಎಂದರೆ ಸರಿ. ಸದರಿ ಪತ್ರದಲ್ಲಿ 3 ವರ್ಷ ಅವಧಿಯನ್ನು ನಿಗದಿಯಾಗಿದ್ದು ಸಾಕ್ಷಿ ಪುನಃ 1 ವರ್ಷದೊಳಗೆ ಕ್ರಯ ಪತ್ರ ಮಾಡಿಸಿಕೊಳ್ಳಬೇಕಾಗಿತ್ತು ಎಂದು ನುಡಿಯುತ್ತಾರೆ. 1 ವರ್ಷದ ಒಳಗೆ ಕ್ರಯ ಪತ್ರ ಮಾಡಿಸಿಕೊಡಬೇಕು ಎಂದು ಬೇರೆ ಯಾವುದೆ ದಾಖಲೆ ಆಗಿಲ್ಲ, ನಾವುಗಳು ಹಾಗೆ ಮಾತನಾಡಿಕೊಂಡಿದ್ದೇವು. 1 ವರ್ಷದ ಒಳಗೆ ಕ್ರಯ ಪತ್ರ ಮಾಡಿಸಿಕೊಡಬೇಕೆಂದು ಪತ್ರ ಬರವಣಿಗೆ ಆಗಿಲ್ಲ. 1 ವರ್ಷದ ಒಳಗೆ ಕ್ರಯ ಪತ್ರ ಮಾಡಿಸಿಕೊಡಬೇಕೆಂಬ ಹೇಳಿದ ಬಗ್ಗೆ ಸಾಕ್ಷಿದಾರರು ಇರುತ್ತಾರೆ.

ದಾವೆ ಹಾಕುವ ಸಂದರ್ಭದಲ್ಲಿ ಅಗ್ರಿಮೆಂಟ್ ಆಗಿ 2 ವರ್ಷಗಳು ಆಗಿತ್ತು. ದಾವಾ ಹಾಕುವ ಪೂರ್ವದಲ್ಲಿ 3 ರಿಂದ 6 ನೇ ಪ್ರತಿವಾದಿಯವರಿಗೆ 3 ಬಾರಿ ನೊಟೀಸು ಕಳುಹಿಸಲಾಗಿತ್ತು. ಆ ಬಗ್ಗೆ ದಾಖಲೆಯನ್ನು ವಕೀಲರ ಬಳಿ ಕೊಟ್ಟಿದ್ದೆ. ಮೊದಲನೇ ನೊಟೀಸನ್ನು ಯಾವ ದಿನಾಂಕದಂದು ಕೊಡಲಾಗಿತ್ತು ಎಂದು ಈಗ ನನಗೆ ನೆನಪಿಲ್ಲ. ಅದೆ ನನಗೆ ಎರಡನೇ ಬಾರಿ ಹಾಗೂ 3 ನೇ ಬಾರಿ ಯಾವ ದಿನಾಂಕಗಳಂದು ಕೊಡಲಾಗಿತ್ತು ಎಂಬ ಬಗ್ಗೆ ಹುಷಾರಿಲ್ಲದ ಕಾರಣ ಈಗ ನನಗೆ ನೆನಪಿಲ್ಲ. ಸದರಿ ನೊಟೀಸುಗಳನ್ನು ವಕೀಲರ ಮೂಲಕವೇ ಕೊಡಲಾಗಿತ್ತು. ಉಳಿದ ಹಣವನ್ನು ಪಡೆದು ಜಮೀನು ರಿಜಿಸ್ಟರ್ ಮಾಡಿಸಿಕೊಡುವಂತೆ ನೊಟೀಸು ಕೊಡಲಾಗಿತ್ತು. ಜಮೀನು ದುರಸ್ತು ಮಾಡಿಸಿಕೊಂಡು ಕ್ರಯ ಮಾಡಿಕೊಡುವಂತೆ ಒಪ್ಪಂದ ಆಗಿತ್ತು. 3 ಬಾರಿ ನೊಟೀಸು ನೀಡಿದಾಗಲೂ ದಾವಾ ಆಸ್ತಿ ದುರಸ್ತಿ ಆಗಿರಲಿಲ್ಲ. ನಿಪಿ. 1 ರಲ್ಲಿ ಜಮೀನು ದುರಸ್ತು ಆದ ನಂತರವೇ ಕ್ರಯ ಮಾಡಿಕೊಡಬೇಕೆಂಬ ಶರತ್ತು ಇರಲಿಲ್ಲ, ನಾವುಗಳೆ ಹಾಗೆ ಮಾತನಾಡಿಕೊಂಡಿದ್ದೇವು. 3 ನೇ ಬಾರಿ

ನೊಟೀಸು ಕೊಟ್ಟಾಗಲೂ ನಿಪಿ. 1 ರಲ್ಲಿ ಯಾವ ವಿಳಾಸ ನೀಡಿದ್ದರು ಅದೆ ವಿಳಾಸಕ್ಕೆ ನೊಟೀಸು ನೀಡಿಲಾಗಿತ್ತು ಎನ್ನುತ್ತಾರೆ. ಹಾಗೆ ಕಳುಹಿಸಿದ ನೊಟೀಸು 3 ರಿಂದ 6 ನೇ ಪ್ರತಿವಾದಿ ಜಾರಿಯಾಗಿಲ್ಲ ಎಂದರೆ ಅವರು ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ.

3 ರಿಂದ 6 ನೇಪ್ರತಿವಾದಿಗಳ ವಿಳಾಸವಾದ ಕುಡಿನೀರುಮುದ್ದನಹಳ್ಳಿ ವಿಳಾಸಕ್ಕೆ ನೊಟೀಸು ಜಾರಿ ಮಾಡಿದ್ದಿರಾ ಎಂದರೆ ಸಾಕ್ಷಿ ಅಲ್ಲಿ ಯಾರೂ ವಾಸ ಇಲ್ಲ ಎನ್ನುತ್ತಾರೆ. ನಿಪಿ. 1 ರ ಕರಾರು ಪತ್ರದಲ್ಲಿ 3 ರಿಂದ 6 ನೇ ಪ್ರತಿವಾದಿಗಳ ವಿಳಾಸ ರತ್ನಪುರಿ ಎಂದು ನಮೂದು ಆಗಿದೆ. 3 ರಿಂದ 6 ನೇ ಪ್ರತಿವಾದಿಗಳಿಗೆ ರತ್ನಾಪುರಿ ವಿಳಾಸಕ್ಕೆ ನೊಟೀಸು ಕಳುಹಿಸಿದ್ದಿರಾ ಎಂದರೆ ಕಳುಹಿಸಿದ್ದೇವು ಎಂದು ನುಡಿದು ಅವರು ಆಗಲೇ ಬೆಂಗಳೂರಿಗೆ ಹೋಗಿದ್ದರು ಎಂದು ನುಡಿಯುತ್ತಾರೆ. ಈಗ ಕೇಸು ನಡೆಸುತ್ತಿರುವ ವಕೀಲರ ಮೂಲಕವೇ ಆಗ ನೊಟೀಸು ಕಳುಹಿಸಲಾಗಿತ್ತು. ಹಾಗೆ ರತ್ನಾಪುರಿ ವಿಳಾಸಕ್ಕೆ ಕಳುಹಿಸಿದ ನೊಟೀಸನ ಪ್ರತಿ ಹಾಜರು ಪಡಿಸಿಲ್ಲ ಎಂದರೆ ವಕೀಲರ ಬಳಿ ಇದೆ ಎನ್ನುತ್ತಾರೆ. 3 ರಿಂದ 6 ನೇ ಪ್ರತಿವಾದಿಯವರಿಗೆ ರತ್ನಾಪುರಿ ವಿಳಾಸಕ್ಕೆ ನಮ್ಮ ವಕೀಲರ ನೊಟೀಸು ಕಳುಹಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ. 1 ರ ಕರಾರು ಪತ್ರದಲ್ಲಿ ಜಮೀನು ದರಖಾಸ್ತು ಜಮೀನು ಅದ ಕಾರಣ ದುರಸ್ತು ಆಗಿಯೇ ಕ್ರಯ ಪತ್ರ ಆಗಬೇಕೆಂಬ ಶರತ್ತು ಇತ್ತು ಎಂದರೆ ಆ ರೀತಿ ಇರಲಿಲ್ಲ ಎನ್ನುತ್ತಾರೆ. ದುರಸ್ತು ಆಗಿ 1 ವರ್ಷದ ಒಳಗೆ ಕ್ರಯ ಪತ್ರ ಮಾಡಬೇಕೆಂದು ನೊಂದಾಯಿತ ರಹಿತ ಇನ್ನೊಂದು ಕರಾರು ಪತ್ರದಲ್ಲಿ ಆಗಿತ್ತು ಎಂದರೆ ಸರಿಯಲ್ಲ, ಅದರೆ ಬಾಯಿ ಮಾತನಲ್ಲಿ ಸಾಕ್ಷಿದಾರರ ಸಮಕ್ಷಮ ಹಾಗೆ ಒಪ್ಪಂದ ಆಗಿತ್ತು ಎನ್ನುತ್ತಾರೆ. ನಿಪಿ. 1 ರ ಕರಾರು ಪತ್ರದಲ್ಲಿ ನಮೂದಿಸಿದ ಶರತ್ತಿಗೆ ವಿರುದ್ಧವಾಗಿ ಈ ದಾವೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಕರಾರು ಪತ್ರದ ಪ್ರಕಾರ ನಡೆದುಕೊಳ್ಳಲು ತಯಾರಾಗಿದ್ದೇವೆ

ಎಂದು 3 ರಿಂದ 6 ನೇ ಪ್ರತಿವಾದಿಗಳಿಗೆ ನಾನು ಯಾವುದೆ ನೊಟೀಸು ಕಳುಹಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯ ಸಮನ್ಸ್ ಹೋದ ನಂತರವೇ 3 ರಿಂದ 6 ನೇ ಪ್ರತಿವಾದಿಗಳಿಗೆ ವಿಷಯ ಗೊತ್ತಾಯಿತು ಎಂದರೆ ಸಾಕ್ಷಿ ಅದಕ್ಕೂ ಮೊದಲು ನಾನು ಅವರ ಬಳಿ ಹೋಗಿ ಕೇಳಿಕೊಂಡಿದ್ದೆ ಎನ್ನುತ್ತಾರೆ.

ದಿಃ 26.04.2022 ರಂದು ನಿಪಿ.1 ರಂತೆ ಕರಾರು ಪತ್ರ ನೊಂದಣಿ ಅದ ದಿನವೇ ಇನ್ನೊಂದು ನೊಂದಾಯಿತ ರಹಿತ ಕರಾರು ಆಗಿತ್ತು ಎಂದರೆ ಹೌದು ಎಂದರೆ ನಂತರ ಸಾಕ್ಷಿ ಬಾಯಿ ಮಾತಿನಲ್ಲಿ ಕರಾರು ಆಗಿತ್ತು ಎಂದು ನುಡಿಯುತ್ತಾರೆ. ದಿಃ 26.04.2022 ರಂದು ಆದ ಇನ್ನೊಂದು ನೊಂದಾಯಿತ ರಹಿತ ಕರಾರು ಪತ್ರ ನಿಮ್ಮ ಬಳಿ ಇರುತ್ತದೆ ಎಂದರೆ ಸಾಕ್ಷಿ ಅದನ್ನು ಈಗಾಗಲೆ ನ್ಯಾಯಾಲಯಕ್ಕೆ ಕೊಡಲಾಗಿದೆ ಎನ್ನುತ್ತಾರೆ. ಉದ್ದೇಶ ಪೂರಕವಾಗಿ ದಿಃ 26.04.2022 ರ ನೊಂದಾಯಿತ ರಹಿತ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿನ ವಿಷಯಗಳು ನನಗೆ ಗೊತ್ತಿರುತ್ತದೆ. ಸದರಿ ಅಗ್ರಿಮೆಂಟ್ ನಲ್ಲಿ ದಾವಾ ಆಸ್ತಿ ಜಮೀನು 53 ಲಕ್ಷಕ್ಕೆ ಕ್ರಯಕ್ಕೆ ಒಪ್ಪಂದ ಆಗಿರುತ್ತದೆ ಎಂದರೆ ಸರಿ. ಸದರಿ 53 ಲಕ್ಷ ರೂ. ಗಳಲ್ಲಿ 15 ಲಕ್ಷ ರೂ.ಗಳನ್ನು ಮುಂಗಡವಾಗಿ ಕೊಟ್ಟಿದ್ದೆ ಎಂದರೆ ಸರಿ. ಹಾಗೆ 38 ಲಕ್ಷ ರೂ. ಬಾಕಿ ಇದೆ ಎಂಬ ಪ್ರಶ್ನೆಗೆ ಸಾಕ್ಷಿ ಇನ್ನೊಂದು ಖಾಲಿ ಅಗ್ರಿಮೆಂಟ್ ನಲ್ಲಿ 18 ಲಕ್ಷ ರೂ. ಗಳಿಗೆ ಒಪ್ಪಂದ ಮಾಡಿಕೊಂಡು 4 ಲಕ್ಷ ರೂ.ಗಳನ್ನು ಪ್ರತಿವಾದಿಯವರು ಪಡೆದುಕೊಂಡಿದ್ದರು ಎನ್ನುತ್ತಾರೆ. ಸದರಿ ಖಾಲಿ ಅಗ್ರಿಮೆಂಟ್ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ತಂದು ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವುದು ಬೇಡ ಎಂದು 2 ಮತ್ತು 3 ನೇ ಪ್ರತಿವಾದಿಯವರು ಹೇಳಿದ್ದರು. ಕ್ರಯ ಮೊಬಲಗು ಒಟ್ಟು 53 ಲಕ್ಷ ರೂ.ಗೆ ಒಪ್ಪಿಕೊಂಡಿದ್ದು, 15 ಲಕ್ಷ ರೂ.ಗಳನ್ನು ಮುಂಗಡವಾಗಿ ಕೊಡಲಾಗಿತ್ತು ಎಂದರೆ ಸರಿ. ಉಳಿದ 38 ಲಕ್ಷ ರೂ.ಗಳನ್ನು ಕೊಟ್ಟು ಕ್ರಯ ಮಾಡಿಕೊಡಬೇಕಾಗಿತ್ತು ಎಂದರೆ ಸರಿ.

ದಿಃ 26.04.2022 ರಂದು ಅದ ನೊಂದಾಯಿತ ರಹಿತ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಪ್ರತಿವಾದಿಗಳು ಮತ್ತು ನಾವು ಹಾಗೆ ಮಾತನಾಡಿಕೊಂಡಿದ್ದ ಕಾರಣ ಹಾಜರುಪಡಿಸಿಲ್ಲ ಎನ್ನುತ್ತಾರೆ. ನಾನು ಮತ್ತು 2 ನೇ ಪ್ರತಿವಾದಿ ಸ್ನೇಹಿತರು ಎಂದರೆ ಸರಿಯಲ್ಲ, ಪರಿಚಯುದವರು ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.